# 2. ಕನಸು ಮತ್ತು ಸಂದೇಶ

ಮೂಲ : ಎ.ಪಿ.ಜೆ.ಅಬ್ದುಲ್ ಕಲಾಂ

ಕನ್ನಡಕ್ಕೆ: ಜಯಕೃಷ್ಣ ಟಿ.ಎನ್.

ಲೇಖಕರ ಪರಿಚಯ :

| | | |
|---|---|---|
| ಲೇಖಕ | : | ಎ.ಪಿ.ಜೆ. ಅಬ್ದುಲ್ ಕಲಾಂ |
| ಜನನ | : | 15–10–1931 |
| ಮರಣ | : | 27.07.2015 |
| ಸ್ಥಳ | : | ತಮಿಳುನಾಡಿನ ರಾಮೇಶ್ವರ |
| ಕೃತಿಗಳು | : | ವಿಂಗ್ಸ್ ಆಫ್ ಫೈರ್ (ಆತ್ಮಕಥೆ), ಇಂಡಿಯಾ ಮೈ ಡ್ರೀಮ್, ಇಂಡಿಯಾ 2020, ಮೈ ಜರ್ನಿ, ಪಾರ್ಗೇಸ್ ತ್ರಿಬಿಲಿಯನ್ ವರ್ನಿಂಗ್ ಪಾಯಿಂಟ್, ದಿ ಲೈಫ್ ಟ್ರೀ |
| ಪ್ರಶಸ್ತಿಗಳು | : | ಪದ್ಮಭೂಷಣ, ಪದ್ಮವಿಭೂಷಣ, ಭಾರತ ರತ್ನ, ಸುಮಾರು 30 ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ |
| ವಿಶೇಷತೆ | : | ಭಾರತದ ಹನ್ನೊಂದನೆ ರಾಷ್ಟ್ರಪತಿಯಾಗಿದ್ದರು. ದೇಶದ ಹೆಮ್ಮೆಯ ಪರಮಾಣು ವಿಜ್ಞಾನಿ. |
| ಆಕರ | : | ಪ್ರಜ್ವಲಿತ ದೀಪಗಳು |

ಪಾಠ ಪ್ರವೇಶ –

## ಅಭ್ಯಾಸ

I. ಪದಗಳ ಅರ್ಥ ತಿಳಿಯಿರಿ.

ಆಘಾತ - ಪೆಟ್ಟು; ಕೇಡು
ಆಹುತಿ - ಬಲಿ
ಕುಬ್ಜ - ಕುಳ್ಳ; ಸಣ್ಣವ
ಕೃತ್ಯ - ಕೆಲಸ
ದಿರಸು - ಉಡುಪು
ಧರಣಿ - ಭೂಮಿ
ನೀರವತೆ - ಮೌನ; ನಿಶ್ಶಬ್ದ
ಬೀಭತ್ಸ - ಜುಗುಪ್ಸೆ; ಅಸಹ್ಯ
ಮರುಭೂಮಿ - ಮರಳು ತುಂಬಿದ ಭೂಮಿ
ವಿಭಜಿತ - ಬೇರೆಯಾದ; ವಿಂಗಡಿಸಿದ
ಆರಾಧಿಸು - ಪೂಜಿಸು; ಸ್ಮರಿಸು
ಉದ್ಯುಕ್ತ - ಪ್ರಯತ್ನಿಸು; ಸಿದ್ಧವಾಗು
ಕೃತಜ್ಞತೆ - ಉಪಕಾರ ಸ್ಮರಣೆ
ದಿಗಂತ - ಕ್ಷಿತಿಜ
ದಿಗ್ವಿಜಯ - ರಾಜ್ಯಗಳನ್ನು ಜಯಿಸುವುದು
ನಿರ್ದಯಿ - ಕ್ರೂರಿ; ದಯೆ ಇಲ್ಲದವ
ಪವಾಡಸದೃಶ - ಆಶ್ಚರ್ಯಕರ ರೀತಿಯಲ್ಲಿ
ಭಾಸವಾಗು - ಕಾಣು; ತೋರು
ಮೇಧಾವಿ - ಬುದ್ಧಿವಂತ

II. ಪ್ರಶ್ನೆಗಳು :

(ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. **ಕಲಾಂ ಅವರು ಸಾಮಾನ್ಯವಾಗಿ ನಿತ್ಯ ಎಷ್ಟು ಗಂಟೆಗೆ ಮಲಗಿ, ಎಷ್ಟು ಗಂಟೆಗೆ ಏಳುತ್ತಿದ್ದರು?**

ಉ. ಕಲಾಂ ಅವರು ಸಾಮಾನ್ಯವಾಗಿ ನಿತ್ಯ ರಾತ್ರಿ ಒಂದು ಗಂಟೆಗೆ ಮಲಗಿ ಬೆಳಿಗ್ಗೆ ಆರು ಗಂಟೆಗೆ ಏಳುತ್ತಿದ್ದರು.

2. **ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವುದು?**

ಉ. ಕಲಾಂ ಅವರು ಕನಸಿನಲ್ಲಿ ಮರುಭೂಮಿ ಪ್ರದೇಶವನ್ನು ಕಂಡರು.

3. **ಕಲಾಂ ಅವರು ಕನಸಿನಲ್ಲಿ ಕಂಡ ಐವರು ಮಹಾಪುರುಷರು ಯಾರು?**

ಉ. ಕಲಾಂ ಅವರು ಕನಸಿನಲ್ಲಿ ಕಂಡ ಐವರು ಮಹಾಪುರುಷರೆಂದರೆ – ಮಹಾತ್ಮಾಗಾಂಧಿ, ಆಲ್ಬರ್ಟ್ ಐನ್‌ಸ್ಟೀನ್, ಚಕ್ರವರ್ತಿ ಅಶೋಕ, ಅಬ್ರಹಾಂ ಲಿಂಕನ್, ಕ್ಯಾಲಿಫ್ ಒಮರ್.

Scanned with CamScanner

4. ಅಶೋಕನು ಪ್ರತಿಪಾದಿಸಿದ ಧರ್ಮ ಯಾವುದು?

ಉ. ಅಶೋಕನು ಪ್ರತಿಪಾದಿಸಿದ ಧರ್ಮ ಅಹಿಂಸಾಧರ್ಮ.

5. ಅಶೋಕನ ಪ್ರಕಾರ ನಿಜವಾದ ಗೆಲುವು ಯಾವುದು?

ಉ. ಅಶೋಕನ ಪ್ರಕಾರ ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು.

Scanned with CamScanner